ಶ್ರೀ ಎಂ. ಬಿ. ರಾಮಸಪ್ಪಯ್ಯ.—ಉಪಾಧ್ಯಾಯರುಗಳನ್ನು ವರ್ಗ ಮಾಡುವಾಗ ಸರಕಾರ ಏನು ನಿಯಮ ಇಟ್ಟುಕೊಂಡಿದೆ ಅವರಂತೆ ಎರಡು ವರ್ಷಗಳವರೆಗೆ ಒಂದು ಕಡೆಯಲ್ಲಿದ್ದರೆ ಅವರನ್ನು ಬೇರೆ ಕಡೆಗೆ ಎಂದರೆ ಒಂದು ಜಿಲ್ಲೆಯಲ್ಲೇ ವರ್ಗ ಮಾಡಬೇಕು ಬೇರೆ ಜಿಲ್ಲೆಗಳಿಗೆ ಅಥವಾ ತಾಲ್ಲೂಕುಗಳಿಗೆ ವರ್ಗ ಮಾಡಕೂಡದು ಎಂದು ಇದ್ದರೂ ಬಡ ಉಪಾಧ್ಯಾಯರುಗಳನ್ನು ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ಸರಕಾರ ವರ್ಗ ಮಾಡುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ? ಇದರ ಬಗ್ಗೆ ಸರಕಾರ ಏನು ಹೇಳುತ್ತದೆ.

ಶ್ರೀ ಎ. ಆರ್. ಬದರಿನಾರಾಯಣ.—ಇದುವರೆಗೂ ಇಂತಹ ಉಪಾಧ್ಯಾಯರುಗಳನ್ನು ವರ್ಗ ಮಾಡುತ್ತಿರಲಿಲ್ಲ. ಇವರ ಮೇಲೆ ದೂರುಗಳು ಬಂದುದರಿಂದ ಮತ್ತು ಒಂದೇ ಕಡೆ ಅವರೆ ಊರುಗಳಲ್ಲೇ ಇರುವುದರಿಂದ ಉಪಾಧ್ಯಾಯರುಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ.ಇದರಿಂದ ಇವರನ್ನು ಬೇರೆ ಕಡೆಗೆ ವರ್ಗಮಾಡಬೇಕೆಂದು ಮನವಿಗಳು ಬಂದುದರಿಂದ ಸರಕಾರ ಇದರ ಮೇಲೆ ವಿಚಾರ ಮಾಡಿ ಈಗ ಹತ್ತು ವರ್ಷಗಳ ಕಾಲ ಒಂದೇ ಕಡೆಯಲ್ಲಿದ್ದವರನ್ನು ಮಾತ್ರ ಬೇರೆ ಕಡೆಗೆ ವರ್ಗ ಮಾಡಬೇಕೆಂದು ತೀರ್ಮಾನ ಮಾಡಿ ಇದನ್ನು ಒಂದು ಫೈನ್ಲ್ ಪ್ರೊಗ್ರಾಂ ಪ್ರಕಾರ ಮಾಡಬೇಕು ಎಂದು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ.

SUBSIDY TO OIL ENGINES

112. Sri K. H. KURADGI (Mundargi) :—

Will the Minister for Agriculture and Forests be pleased to state :—

(*a*) the reasons for sanctioning subsidy to the oil engines supplied by all Taluk Boards of Dharwar District excepting those supplied by Nargund and Mundargi Taluk Boards ;

(*b*) whether arrangement will be made to sanction the same to the oil engines of these two Taluka Boards ?

Sri K. H. PATIL (Minister for Agriculture and Forests) :—

(*a*) The concession of subsidy is granted only to those whom the oil engines have been sanctioned during 1st April 1965 to 31st March 1967. During this period, no ryot has been supplied with oil engines in Nargund taluk ;

Except one, nobody has paid the instalment amount together with interest in Mundargi Taluk. Therefore the remaining persons have lost the eligibility of getting the subsidy. The subsidy amount has already been sanctioned to that person.

(*b*) The question does not arise.

ಶ್ರೀ ಕೆ. ಹೆಚ್. ಕುರಡಗಿ.—ಧಾರವಾಡ ಜಿಲ್ಲೆಯಲ್ಲಿ ಎರಡು ತಾಲೂಕುಗಳಿಗೆ—ಸಬ್ಸಿಡಿಯನ್ನು ಕೊಡದೆ ಇದೆನ್ನು ಬೇರೆ ಕಡೆಗೆ ಮಾತ್ರ ಕೊಟ್ಟಿದ್ದೀರಿ. ಈಗಲಾದರೂ ಇದನ್ನು ಮತ್ತೆ ವಿಚಾರ ಮಾಡಿ ಸಬ್ಸಿಡಿ ಕೊಡಿಸುತ್ತೀರಾ ?

†ಶ್ರೀ ಕೆ. ಹೆಚ್. ಪಾಟೀಲ್.—ಇದು ಧಾರವಾಡ ಜಿಲ್ಲೆ ಮಾತ್ರವಲ್ಲ, ಮೈಸೂರು ರಾಜ್ಯದ ಎಲ್ಲ ಜಿಲ್ಲೆಗಳಿಗೂ ಅನ್ವಯವಾಗುತ್ತೆ ಮತ್ತು ಇದು 1—4—1965ರಿಂದ 31—3—1967ರ ಅವಧಿಯಲ್ಲಿ ಮಾತ್ರ ರಿಯಾಯಿತಿ ತೋರಿಸಿ ಸಬ್ಸಿಡಿ ಕೊಡಲಾಗಿದೆ, ಇತರ ಕಡೆಗಳಲ್ಲಿ ಬಾಕಿ ಕಂತಿನ ಹಣ ಕೊಡದೇ ಇರುವುದರಿಂದಾಗಿ ಅವರು ರಿಯಾಯಿತಿಗಳನ್ನು ಪಡೆಯಲು ಆಗಲಿಲ್ಲ.

ಅಧ್ಯಕ್ಷರು—ಇಲ್ಲಿಗೆ ಪ್ರಶ್ನೋತ್ತರ ವೇಳೆಯಾಯಿತು.